U.S. Consulate General Chennai
Press Release
220, Anna Salai, Gemini Circle, Chennai - 600 006
Phone: +91-44-2857-4181 | Mail: ChennaiPDPress@State.Gov

## ಎಜುಕೇಶನ್‌ಯುಎಸ್‌ಎಯಿಂದ ಭಾರತದೆಲ್ಲೆಡೆ "ಯುಎಸ್‌ನಲ್ಲಿ ಅಧ್ಯಯನ ಮೇಳ ಆಯೋಜನೆ

**ನವದೆಹಲಿ, ಆಗಸ್ಟ್ 4:** ಅಮೆರಿಕದಲ್ಲಿಉನ್ನತ ಶಿಕ್ಷಣ ಕುರಿತ ಮಾಹಿತಿ ನೀಡುವ ಅಧಿಕೃತ ಮೂಲವಾದ ಎಜುಕೇಶನ್‌ಯುಎಸ್‌ಎ ಭಾರತದ ಎಂಟು ಕಡೆಗಳಲ್ಲಿ "ಯುಎಸ್‌ನಲ್ಲಿ ಅಧ್ಯಯನ" ಶಿಕ್ಷಣ ಮೇಳ ಆಯೋಜಿಸಲಿದೆ. ಈ ಮೇಳಗಳು ಆಗಸ್ಟ್ 9 ರಂದು ಚೆನ್ನೈಯಲ್ಲಿ ಆರಂಭವಾಗಿ ಆಗಸ್ಟ್ 17ರಂದು ಪುಣೆಯಲ್ಲಿ ಕೊನೆಗೊಳ್ಳಲಿವೆ. ದೇಶಾದ್ಯಂತ ನಡೆಯುವ ಈ ಮೇಳದಲ್ಲಿ ಮಾನ್ಯತೆ ಪಡೆದ 50 ಕ್ಕೂ ಹೆಚ್ಚು ವಿಶ್ವ ವಿದ್ಯಾಲಯಗಳು ಭಾಗವಹಿಸಲಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಅಮೆರಿಕನ್ ಸಂಸ್ಥೆಗಳ ಅಧಿಕೃತ ಪ್ರತಿನಿಧಿಗಳನ್ನು ಭೇಟಿಯಾಗುವ ಅಪೂರ್ವ ಅವಕಾಶ ದೊರೆಯಲಿದೆ. ಮೇಳಗಳಿಗೆ ಪ್ರವೇಶ ಉಚಿತ. ಮೇಳದಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದ್ದು ನೋಂದಾಯಿಸಿಕೊಳ್ಳುವುದು ಕಡ್ಡಾಯ. https://bit.ly/EdUSAFair25EMB.

ಈ ಮೇಳಗಳು ಅಮೆರಿಕದಲ್ಲಿ ಶಿಕ್ಷಣ ಪಡೆಯಲು ಬಯಸುವ ಪದವಿ, ಸ್ನಾತಕೋತ್ತರ ಅಥವಾ ಪಿಎಚ್‌ಡಿ ವಿದ್ಯಾರ್ಥಿಗಳಿಗೆ ತಮ್ಮದೇ ಶಿಕ್ಷಣ ಮಾರ್ಗವನ್ನು ರೂಪಿಸಿಕೊಳ್ಳಲು ನೇರ ಸಲಹೆ ಮತ್ತು ಮಾರ್ಗದರ್ಶನ ಪಡೆಯುವ ಅಮೂಲ್ಯ ಅವಕಾಶವನ್ನು ಒದಗಿಸುತ್ತವೆ. ವಿಶ್ವವಿದ್ಯಾಲಯದ ಅಧಿಕಾರಿಗಳು, ಎಜುಕೇಶನ್‌ಯುಎಸ್‌ಎ ಸಲಹೆಗಾರರು ಮತ್ತು ಅಮೇರಿಕ ರಾಯಭಾರ ಕಚೇರಿಯ ಪ್ರತಿನಿಧಿಗಳೊಂದಿಗೆ ನೇರವಾಗಿ ಸಂವಾದ ನಡೆಸುವ ಮೂಲಕ, ವಿಶ್ವಾಸಾರ್ಹ ಮತ್ತು ಪಾರದರ್ಶಕ ಮಾಹಿತಿಯನ್ನು ಪಡೆಯುತ್ತಾರೆ. ಇದು ಅವರಿಗೆ, ಸಮರ್ಪಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಾಗೂ ಕಾನೂನುಬದ್ಧ ಮತ್ತು ಸುಗಮವಾದ ಅಕಾಡೆಮಿಕ್ ಯಶಸ್ಸಿನ ಮಾರ್ಗವನ್ನು ಅನುಸರಿಸಲು ಸಹಾಯ ಮಾಡುತ್ತದೆ.

ಈ ಮೇಳಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು, ಅರ್ಜಿ ಪ್ರಕ್ರಿಯೆಗಳು, ವಿದ್ಯಾರ್ಥಿವೇತನಗಳು, ಅರ್ಹತೆ ಹಾಗೂ ಅಮೆರಿಕದ ಕ್ಯಾಂಪಸ್ ಜೀವನ ಕುರಿತು ತಜ್ಞರ ನೇತೃತ್ವದಲ್ಲಿ ವಿಶೇಷ ಅಧಿವೇಶನಗಳೂ ನಡೆಯಲಿವೆ. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ, ವ್ಯವಹಾರ ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಒಳಗೊಂಡಿರುವ ಈ ಕಾರ್ಯಕ್ರಮಗಳು, ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆಯಲು ಭಾರತೀಯ ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾಹಿತಿ ನೀಡುವ ಉದ್ದೇಶ ಹೊಂದಿವೆ.

**ಮೇಳಗಳ ವೇಳಾಪಟ್ಟಿ:**

| **ದಿನಾಂಕ** | **ನಗರ** | **ಸ್ಥಳ** | **ಸಮಯ** |
|---|---|---|---|
| ಶನಿವಾರ, ಆಗಸ್ಟ್ 9 | ಚೆನ್ನೈ | ಹೋಟೆಲ್ ಹಿಲ್ಟನ್ | ಮಧ್ಯಾಹ್ನ 2:00 ರಿಂದ ಸಂಜೆ 5:00 |
| ಭಾನುವಾರ, ಆಗಸ್ಟ್ 10 | ಬೆಂಗಳೂರು | ಹೋಟೆಲ್ ಹಯಾತ್ ಸೆಂಟ್ರಿಕ್ ಹೆಬ್ಬಾಳ | ಮಧ್ಯಾಹ್ನ 1:00 ರಿಂದ ಸಂಜೆ 5:00 |
| ಸೋಮವಾರ, ಆಗಸ್ಟ್ 11 | ಹೈದ್ರಾಬಾದ್ | ಹೋಟೆಲ್ ಐಟಿಸಿ ಕೊಹಿನೂರ್ | ಸಂಜೆ 4:30 ರಿಂದ ರಾತ್ರಿ 7:30 |
| ಮಂಗಳವಾರ, ಆಗಸ್ಟ್ 12 | ನವದೆಹಲಿ | ಹೋಟೆಲ್ ದಿ ಲಲಿತ್ | ಸಂಜೆ 6:00 ರಿಂದ ರಾತ್ರಿ 9:00 |
| ಬುಧವಾರ, ಆಗಸ್ಟ್ 13 | ಕೊಲ್ಕತ್ತಾ | ಹೋಟೆಲ್ ದಿ ಪಾರ್ಕ್ | ಸಂಜೆ 6:00 ರಿಂದ ರಾತ್ರಿ 9:00 |
| ಶುಕ್ರವಾರ, ಆಗಸ್ಟ್ 15 | ಅಹಮದಾಬಾದ್ | ಹೋಟೆಲ್ ಹಯಾತ್ ವಸ್ತ್ರಾಪುರ | ಮಧ್ಯಾಹ್ನ 2:00 ರಿಂದ ಸಂಜೆ 5:00 |
| ಶನಿವಾರ, ಆಗಸ್ಟ್ 16 | ಮುಂಬೈ | ಹೋಟೆಲ್ ಸೈಂಟ್ ರೆಗಿಸ್ | ಮಧ್ಯಾಹ್ನ 2:00 ರಿಂದ ಸಂಜೆ 5:00 |
| ಭಾನುವಾರ, ಆಗಸ್ಟ್ 17 | ಪುಣೆ | ಹೋಟೆಲ್ ಶೆರಟನ್ ಗ್ರ್ಯಾಂಡ್ ಪುಣೆ ಬಂಡ್ ಗಾರ್ಡನ್ | ಮಧ್ಯಾಹ್ನ 2:00 ರಿಂದ ಸಂಜೆ 5:00 |

**ಭಾರತದಲ್ಲಿನ ಎಜುಕೇಶನ್‌ಯುಎಸ್‌ಎ ಬಗ್ಗೆ:** ಎಜುಕೇಶನ್‌ಯುಎಸ್‌ಎ ಅಮೆರಿಕದ ಸ್ಟೇಟ್ ಡಿಪಾರ್ಟ್‌ಮೆಂಟ್‌ನ ಜಾಲವಾಗಿದ್ದು, 175 ಕ್ಕೂ ಹೆಚ್ಚು ದೇಶಗಳು ಮತ್ತು 430 ಕ್ಕೂ ಹೆಚ್ಚುಕಡೆ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಲಹಾ ಕೇಂದ್ರಗಳನ್ನು ಹೊಂದಿದೆ. ಭಾರತದಲ್ಲಿ, ಎಜುಕೇಶನ್‌ಯುಎಸ್‌ಎ ಸೇವೆಗಳು ದೆಹಲಿ, ಚೆನ್ನೈ, ಕೊಲ್ಕತ್ತಾ, ಮುಂಬೈ ಮತ್ತು ಹೈದರಾಬಾದ್‌ನ ಐದು ಕೇಂದ್ರಗಳ ದೊರೆಯುತ್ತವೆ. ಅಮೆರಿಕದ ಮಾನ್ಯತೆ ಪಡೆದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ, ಎಜುಕೇಶನ್‌ಯುಎಸ್‌ಎ ಅತ್ಯಾಧುನಿಕ, ನಿಖರ ಮತ್ತು ಸಮಗ್ರ ಮಾಹಿತಿಯನ್ನು ಒದಗಿಸುತ್ತದೆ.

ಹೆಚ್ಚಿನ ಮಾಹಿತಿಗಾಗಿ www.educationusa.in ಗೆ ಭೇಟಿ ನೀಡಿ ಅಥವಾ india@educationusa.org ಮೂಲಕ ಸಂಪರ್ಕಿಸಿ.